ಸಾಕ್ಷಿಯನ್ನು ದಿಃ 17-11-2025 ರಂದು ಪುನಃ ಕರೆಯಿಸಿ ಸತ್ಯ ಪ್ರತಿಜ್ಞೆ ಮಾಡಲಾಯಿತು.

**ಪಾಟೀ ಸವಾಲುಃ- ಶ್ರೀ. ವಾಯ್ ಡಿ ಟಿ ವಕೀಲರಿಂದಃ(ವಾದಿ ಪರವಾಗಿ)**

ವಾದಿಯರ ಅಜ್ಜ ಹಾಗೂ ನಮ್ಮ ಅಜ್ಜ ಖಾಸಾ ಸಹೋದರರು ಎಂದರೆ ಸರಿ. ನಾನು ಬಿಕಾಂ ಪಧವಿದರ ನಾಗಿದ್ದೇನೆ. ನಮ್ಮ ಮನೆತನದಲ್ಲಿ ನಾನು ಮತ್ತು ನನ್ನ ಸಹೋದರ ವಿರುಪಾಕ್ಷಪ್ಪ ಗಿಡ್ಡಹನಮನವರ ಮಾತ್ರಹೆಚ್ಚು ಓದಿದವರು ಎಂದರೆ ಸರಿ. ವಾದಿಯ ಮನೆ ಮತ್ತು ನಮ್ಮ ಮನೆ ಒಂದೇ ಓಣಿಯಲ್ಲಿವೆ ಎಂದರೆ ಸರಿ. ನಾನು ವಾದಿಯರ ಮನೆತನದ ವ್ಯವಹಾರದ ಬಗ್ಗೆ ಯಾವುದೇ ಹಿರಿತನ ಮಾಡಿರುವುದಿಲ್ಲ. ನಾನು ಯಾವುದೇ ಜಮೀನುಗಳನ್ನು ಮಾರಾಟ ಮಾಡಿಸುವ ಅಥವಾ ರಿಯಲ್ ಎಸ್ಟೇಟ್ ಕೆಲಸ ಮಾಡುವುದಿಲ್ಲ. ವಾದಿ ಮತ್ತು ಪ್ರತಿವಾದಿಯರ ಮನೆತನದ ಬಗ್ಗೆ ಏನೇನು ವ್ಯವಹಾರ ನೆಡೆಯುತ್ತಿತ್ತು ಮತ್ತು ಯಾರು ಹಿರೆತನ ಮಾಡುತ್ತಿದ್ದರು ಗೊತ್ತಿಲ್ಲ. ಸರ್ವೇ ನಂ.735/1+2/ಬಿ ಕ್ಷೇತ್ರ 4 ಎಕರೆ 1 ಗುಂಟೆ ಪೈಕಿ 2 ಎಕರೆ 1 ಗುಂಟೆ ಜಮೀನಿನ ಖರೀದಿ ಮಾತುಕತೆ ಕೊಟ್ರಪ್ಪ ಕಮತಾರ ಇವರ ಮನೆಯಲ್ಲಿ ನೆಡೆಯಿತು. ಆ ಸಮಯದಲ್ಲಿ ನಾನು, ಮೋಹನ ಕಮತಾರ, ರಾಚಪ್ಪ ಕೋರೆ ಹಾಗೂ ಆನಂದ ಜೋಗಾಡಿ , ಮಲ್ಲಪ್ಪ ಸವದತ್ತಿ ಇದ್ದೇವು. ಇವರಲ್ಲದೆ ಬೇರೆಯವರು ಇರಬಹುದು ಆದರೆ ವ್ಯವಹಾರ ಮಾತುಕತೆ ಇಷ್ಟು ಜನರು ಮಾತ್ರ ಮಾಡಿದ್ದೇವೆ ಎಂದು ಹೇಳುತ್ತಾರೆ. ಆ ದಿನ ಹಾಜರು ಇದ್ದ ಬೇರೆಯವರ ಹೆಸರು ಗೊತ್ತಿಲ್ಲ. ಎಕರೆಗೆ ರೂ.3,26,000/ ದಂತೆ ಮಾತುಕತೆ ಆಯಿತು. ಮಾತುಕತೆ ಆದ ದಿನ ರೂ.500/- ಅಥವಾ ರೂ.1,000/- ಸಂಚಕಾರವನ್ನು 1 ನೇ ವಾದಿ ಯಲ್ಲಪ್ಪ ಜಮೀನು ಮಾಲೀಕರಿಗೆ ಸಾಕ್ಷಿದಾರರಾದ ಮೋಹನ ಕಮತಾರ ಮೂಲಕ ಕೊಟ್ಟನು. ಉಳಿದ ಹಣವನ್ನು ಖರೀದಿ ಪತ್ರ ಆಗುವ ಒಂದು ತಿಂಗಳ ಮುಂಚೆ ನೀಡಲಾಗಿತ್ತು. ಸದರಿ ಹಣವನ್ನು 1 ನೇ ಪ್ರತಿವಾದಿ ನನ್ನ ಹಾಗೂ ಆನಂದ ಜೋಗಾಡಿ ಕಡೆ ಇವರ ಕೈಯಲ್ಲಿ ನೀಡಿದ್ದು ಸದರಿ ಹಣವನ್ನು ಜಮೀನು ಮಾಲೀಕರಿಗೆ ಮುಟ್ಟಿಸಿದೆವು. ಆ ಸಮಯದಲ್ಲಿ 1 ನೇ ವಾದಿ ಹಾಜರು ಇದ್ದ. ಸಾಮಾನ್ಯವಾಗಿ ಒಂದು ಮನೆಯಲ್ಲಿ ವ್ಯವಹಾರದ ಹಣ ಕೊಡಬೇಕಾದರೆ ಮನೆಯ ಹಿರಿಯನ ಮೂಲಕ ಕೊಡಲಾಗುತ್ತದೆ

ಎಂದರೆ ಸರಿ. ಅದು ಹಿರಿಯರಿಗೆ ಕೊಡುವ ಗೌರವ ಎಂದರೆ ಸರಿ. ಸದರಿ ಹಣವನ್ನು 1 ನೇ ವಾದಿ ಯಲ್ಲಪ್ಪ 1 ನೇ ಪ್ರತಿವಾದಿ ಕರಕಪ್ಪನ ಮೂಲಕ ನಮಗೆ ಕೊಡಿಸಿದನು ಎಂದರೆ ಸರಿಯಲ್ಲ. ಆದರೆ ಕರಕಪ್ಪ ನಮ್ಮ ಕೈಯಲ್ಲಿ ಹಣ ನೀಡಿದ್ದು ಮಾತ್ರ ಗೊತ್ತು ಎಂದು ಹೇಳುತ್ತಾರೆ. ಸದರಿ ಖರೀದಿಯ ಸಂಪೂರ್ಣ ರಖಂನ್ನು 1 ನೇ ವಾದಿ ಕೊಟ್ಟಿದ್ದಾನೆ ಎಂದರೆ ಸರಿಯಲ್ಲ. ನಿಡಿಃ1 ಖರೀದಿ ಪತ್ರಕ್ಕೆ ನಾನು ಸಹಿ ಮಾಡಿದ್ದೇನೆ. ಖರೀದಿ ಪತ್ರದಲ್ಲಿ 1 ನೇ ಪ್ರತಿವಾದಿ ಕರಕಪ್ಪ ನೀಡಿದ್ದಾನೆ ಎಂದು ಬರೆದಿಲ್ಲ ಎಂದರೆ ಗೊತ್ತಿಲ್ಲ ಆದರೆ ಕರಕಪ್ಪ ಹಣ ಕೊಟ್ಟಿದ್ದು ನಿಜ ಎಂದು ಹೇಳುತ್ತಾನೆ. 1 ನೇ ಪ್ರತಿವಾದಿ ಕರಕಪ್ಪ ನನ್ನ ದೊಡ್ಡಪ್ಪ. ವಾದಿಯರು ಈ ದಾವೆಯನ್ನು ದಾವಾ ಆಸ್ತಿಗಳಲ್ಲಿ ಪಾಲು ಕೇಳಿ ಹಾಕಿದ್ದಾರೆ ಎಂದರೆ ನನಗೆ ಖರೀದಿ ಪತ್ರದ ವಿಷಯವಾಗಿ ಗೊತ್ತಿದ್ದ ವಿಷಯವನ್ನು ಮಾತ್ರ ಹೇಳಲು ಬಂದಿದ್ದೇನೆ ಎಂದು ಹೇಳುತ್ತಾರೆ. ದಾವಾ ಆಸ್ತಿಗಳೆಲ್ಲವೂ ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿ. ಎಲ್ಲಾ ವಿಷಯ ಗೊತ್ತಿದ್ದರೂ ಪ್ರತಿವಾದಿಯರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಗದಗ.